# ಎಲ್ಲಾ

# ವಿಷಯಗಳ

# ನವೀಕರಣ

**WGS Ministries**

**PO Box 90047**

**San Antonio, TX 78209**

**www.WGSministries.org**

ಉಲ್ಲೇಖಿಸಿದ ಎಲ್ಲಾ ಗ್ರಂಥಗಳು ನ್ಯೂ ಅಮೇರಿಕನ್ ಸ್ಟ್ಯಾಂಡರ್ಡ್ ಬೈಬಲ್‌ನ್ನು ಆಧರಿಸಿವೆ. ನ್ಯೂ ಅಮೆರಿಕನ್ ಸ್ಟ್ಯಾಂಡರ್ಡ್ ಬೈಬಲ್ (NASB) Copyright © 1960, 1962, 1963, 1968, 1971, 1972, 1973, 1975, 1977, 1995 The Lockman Foundation

Copyright © 2015 Jonathan Williams

All rights reserved

ISBN-10:1502593858

ISBN-13: 978-1502593856

# ಯಾಕೆ?

ಲೋಕದಲ್ಲಿ ಯಾಕೆ ಇಷ್ಟೊಂದು ವ್ಯಥೆ? ಇಷ್ಟೊಂದು ದುಃಖವಿದೆ?



ನಿಂದನೆ, ಮನುಷ್ಯರ ಸಾಗಣಿಕೆ, ಯುದ್ಧ, ದಾಸತ್ವ, ಬರೀ ತಮ್ಮ ಸ್ವಂತ ಬಲಕ್ಕಾಗಿ ಯೋಚಿಸುತ್ತಿರುವ ಹಿಂಸಾತ್ಮಕ ಜನರಿಂದಾಗಿ ಪ್ರತಿಯೊಬ್ಬರು ಅಪಾಯದಲ್ಲಿರುವ

ಕಾನೂನು ಬಾಹಿರ ಪ್ರದೇಶಗಳಲ್ಲಿ ಮಾನವ ನಿರ್ಮಿತ ಕ್ಷಾಮ, ಅನಾರೋಗ್ಯ, ಕೆಟ್ಟಚಟಗಳು, ಮುರಿದ ಕುಟುಂಬಗಳು, ಮನಸ್ಸಿಗೆ ಬಂದಂತೆ ಹಿಂಸಾಚಾರ, ಭೂಕಂಪಗಳು, ಸುನಾಮಿಗಳು, ಪ್ರಕೃತಿಯಿಂದ ನಾಶನ, ದುಃಖ, ಕಣ್ಣೀರು ಮತ್ತು ಅಂತಿಮ ದುರಂತ ಮರಣ. ಪ್ರತಿಯೊಬ್ಬರು ಸ್ಪರ್ಶಿಸಲ್ಪಟ್ಟಿದ್ದಾರೆ. ಇವೆಲ್ಲವುಗಳ ಮಹಾ ದುಃಖದಿಂದ ಯಾರೂ ತಪ್ಪಿಸಿಕೊಳ್ಳಲಾರರು.

## ಈ ವಿಷಯಗಳ ಬಗ್ಗೆ ಯೋಚಿಸಿ

- ಜಗತ್ತಿನಲ್ಲಿ ದುಃಖ ಮತ್ತು ವ್ಯಥೆ ಇದೆ ಎಂದು ನೀವು ಏಕೆ ಭಾವಿಸುತ್ತೀರಿ?
- ನಿಮ್ಮ ಸಮುದಾಯ ಅಥವಾ ಕುಟುಂಬದಲ್ಲಿ ಯಾವ ಸಮಸ್ಯೆಗಳಿವೆ?
- ನಿಮ್ಮ ಜೀವನದಲ್ಲಿ ನೀವು ಯಾವುದೇ ದುಃಖ, ಅಥವಾ ತೊಂದರೆ ಅನುಭವಿಸುತ್ತಿದ್ದೀರಾ?

# ಇದು ಯಾವಾಗಲೂ ಈ ರೀತಿಯಾಗಿರಲಿಲ್ಲ



ಬೈಬಲ್, ಮಾನವಕುಲಕ್ಕೆ ದೇವರ ಪರಿಶುದ್ಧವಾದ ವಾಕ್ಯ,ಯಾವಾಗಲೂ ಈ ರೀತಿ ಇರಲಿಲ್ಲ ಎಂದು ಅದು ನಮಗೆ ಹೇಳುತ್ತದೆ.

ಆದಿಯಲ್ಲಿ ಸೃಷ್ಟಿಕರ್ತನು ಭೂಮ್ಯಾಕಾಶಗಳನ್ನು ಉಂಟುಮಾಡಿದನು.
ಆತನು ಮಾಡಿದೆಲ್ಲವೂ ಒಳ್ಳೆಯದಾಗಿತ್ತು.

ಮತ್ತು ಆತನ ಸೃಷ್ಟಿಯ ಉನ್ನತ ಸ್ಥಾನದಲ್ಲಿ ಮೊದಲ ಸ್ತ್ರೀ, ಪುರುಷನು ನಿಂತಿದ್ದರು.

## ಸೃಷ್ಟಿ ಕಥೆಯನ್ನು ಆದಿಕಾಂಡ 1 ಮತ್ತು 2 ಓದಿ ಈ ವಿಷಯಗಳ ಬಗ್ಗೆ ಯೋಚಿಸಿ

- ಈ ಕಥೆಯಲ್ಲಿ ನೀವು ದೇವರ ಬಗ್ಗೆ ಏನು ಕಲಿಯುತ್ತೀರಿ?
- ದೇವರು ಮಾನವ ಜನಾಂಗವನ್ನು ಏಕೆ ಸೃಷ್ಟಿಸಿದನು?
- ದೇವರು ನಿಮ್ಮನ್ನು ಸೃಷ್ಟಿಸಿದನೆಂದು ನೀವು ಏಕೆ ಭಾವಿಸುತ್ತೀರಿ?

# ಮಹಾ ದುರಂತ



ಸತ್ಯವೇದವು ತಿಳಿಸುವದೇನೆಂದರೆ, ದುರಂತವು ಬರುವವರೆಗೂ ದೇವರ ಸುಂದರವಾದ ತೋಟದಲ್ಲಿ ಎಲ್ಲವೂ ಚೆನ್ನಾಗಿಯೇ ಇತ್ತು. ಪುರುಷನು ಮತ್ತು ಸ್ತ್ರೀಯು ಇನ್ನೆಂದೂ ಆತನ ಸೇವಕರಾಗಿರಲು ತೃಪ್ತರಾಗಿರಲಿಲ್ಲ. ಅವರು ಇನ್ನೆಂದೂ ದೇವರನ್ನು ದೇವರಾಗಿರಲು ಬಿಡದೆ, ಆತನನ್ನು ಆರಾಧಿಸಿ ಸೇವಿಸಲು ತೃಪ್ತರಾಗಿರಲಿಲ್ಲ. ಸಕಲ ಬಲವು ತಮಗೆ ಬೇಕೆಂದು ಅವರು ಬಯಸುವವರಾದರು. ಅವರು ಆತನಿಲ್ಲದೆ ಲೋಕವನ್ನು ಆಳಲು ಬಯಸಿದರು. ಆಲೋಚಿಸಲಾಗದೆ ಇರುವ ದಂಗೆಯ ಕ್ರಿಯೆಯಲ್ಲಿ ಅವರು ಲೋಕದ ಸೃಷ್ಟಿಕರ್ತನಿಂದ ತಾವು ಸ್ವತಂತ್ರರೆಂದು ಘೋಷಿಸಿದರು.

## ದೊಡ್ಡ ದುರಂತದ ಬಗ್ಗೆ ಆದಿಕಾಂಡ 3ರಲ್ಲಿ ಓದಿ ಮತ್ತು ಈ ವಿಷಯಗಳ ಬಗ್ಗೆ ಯೋಚಿಸಿ

- ಕಥೆಯಲ್ಲಿರುವ ಸರ್ಪ ಯಾರು?
- ಪುರುಷ ಮತ್ತು ಸ್ತ್ರೀ ಏಕೆ ದೇವರಿಗೆ ಅವಿಧೇಯರಾದರು ಎಂದು ನೀವು ಯೋಚಿಸುತ್ತೀದ್ದೀರಾ?
- ಪುರುಷ ಮತ್ತು ಸ್ತ್ರೀ ಅವಿಧೇಯರಾದಾಗ ಏನಾಯಿತು?

# ಮರಣದ ನಾಲ್ಕು ನಿರ್ದೇಶನಗಳು

ಮನುಷ್ಯನ ಪಾಪವು ದುಃಖವನ್ನು ತಂದಿತು ಎಂದು ಬೈಬಲ್ ಹೇಳುತ್ತದೆ. ದುಃಖ, ಮತ್ತು ಸಾವು ಜಗತ್ತಿನಲ್ಲಿ ದೊಡ್ಡ ದುರಂತ. ಮರಣವು ನಾಲ್ಕು ರೀತಿಯಲ್ಲಿ ಬಂದಿತು.

## ಕತ್ತಲೆಯು ಮೇಲ್ಮುಖವಾಗಿತ್ತು.



ಸೃಷ್ಟಿಕರ್ತನ ವಿರುದ್ಧ ದಂಗೆ ಎದ್ದ ಮಾನವ ಕುಲವು ಇನ್ನೆಂದೂ ಆತನನ್ನು ಅರಿಯಲಿಲ್ಲ. ಹಾಗೂ ಆತನಲ್ಲಿ ಭರವಸವಿಡಲಿಲ್ಲ. ಮತ್ತು ತಮ್ಮ ಸ್ವಂತ ಕಲ್ಪನೆಯ ಮೇರೆಗೆ ಕಲ್ಲು ಕಟ್ಟಿಗೆಗಳ, ಮಾತನಾಡಲಾರದ, ಕೇಳದ, ನೋಡದೆ ಇರುವ ವಿಚಿತ್ರವಾದ, ಕ್ರೂರವಾದ ಹೊಸ ದೇವರುಗಳನ್ನು ಅವರು ಮಾಡಿಕೊಂಡರು.



## ಕತ್ತಲೆಯು ಹೊರಮುಖವಾಗಿತ್ತು

ಜನರು ಇತರ ಜನರನ್ನು ನಿಂದಿಸಿ, ದುರುಪಯೋಗಪಡಿಸಿಕೊಳ್ಳಲು, ಹೊರತುಪಡಿಸಲು, ಗುಲಾಮರಾನ್ನಾಗಿರಿಸಿಕೊಳ್ಳಲು, ಕೊಂದು ಹಾಕಲಾರಂಭಿಸಿದರು. ರಾಷ್ಟ್ರವು ರಾಷ್ಟ್ರಕ್ಕೆ ವಿರುದ್ಧವಾಗಿ ಯುದ್ಧಕ್ಕೆ ಹೊರಟವು. ನ್ಯಾಯವು ನೆಲಕ್ಕೆ ಹಾಕಲ್ಪಟ್ಟಿತು. ಜನರು ಲೋಕದಲ್ಲಿರುವ ದುಃಖಕ್ಕಾಗಿ ಗೋಳಾಡಿ, ನಿರೀಕ್ಷೆ ಏನಾದರೂ ಇದೆಯೇ? ಎಂದು ಆಶ್ಚರ್ಯಪಟ್ಟರು.

## ಕತ್ತಲೆಯು ಕೆಳಮುಖವಾಗಿತ್ತು



ಜಗತ್ತು ಇನ್ನೆಂದೂ ಆನಂದದ ತೋಟವಾಗಿರಲಿಲ್ಲ. ಅವರ ಕಾಲುಗಳ ಅಡಿಯಲ್ಲಿದ್ದ ಭೂಮಿಯೂ ಶಪಿಸಲ್ಪಟ್ಟಿತು. ಮುಳ್ಳು ಕಳೆಗಳು ಬೆಳೆಯಲ್ಪಟ್ಟವು. ಜಗತ್ತು ಸಮತೋಲನವನ್ನು ಕಳೆದುಕೊಂಡಿತು. ಬರ, ಕ್ಷಾಮ, ಪ್ರವಾಹ, ಮರಣಕರವಾದ ವ್ಯಾಧಿ, ಭೂಕಂಪಗಳು, ಜಗತ್ತು ಪ್ರಸವವೇದನೆಯಲ್ಲಿ ಕಷ್ಟಪಡುತ್ತಿರುವ ಸ್ತ್ರೀಯ ಹಾಗೆ ತತ್ತರಗೊಂಡಿದೆ.

## ಕತ್ತಲೆಯು ಆಂತರಿಕವಾಗಿತ್ತು

ನಾಚಿಕೆ, ಅಪರಾಧ, ಒಂಟಿತನ, ಆತಂಕ, ಆಶಾರಹಿತ ಸ್ಥಿತಿ ಮತ್ತು ಲೋಕದ ಸ್ಥಿತಿಯನ್ನು ಯಾವ ಸಂಗತಿಯೂ ಮಾರ್ಪಡಿಸಲಾಗದೆಂಬ ಭಯವು ಮನುಷ್ಯನ ಹೃದಯದಲ್ಲಿ ತುಂಬಿತ್ತು.

### ಈ ವಿಷಯಗಳ ಬಗ್ಗೆ ಯೋಚಿಸಿ

- ನಿಮ್ಮ ರಾಷ್ಟ್ರ, ಕುಟುಂಬ ಅಥವಾ ಜೀವನದಲ್ಲಿ ದೇವರೊಂದಿಗಿನ ಸಂಬಂಧ ಹೇಗಿದೆ? ಅಡ್ಡಿಪಡಿಸಿದ್ದೀರಾ?
- ಇತರರೊಂದಿಗೆ ಯಾವುದೇ ಸಂಬಂಧವು ಯಾವುದೇ ರೀತಿಯಲ್ಲಿ ನೋವನ್ನುಂಟುಮಾಡಿದೆಯೇ?
- ಜೀವನವನ್ನು ಕಷ್ಟಕರವಾಗಿಸುವ ಸಮಸ್ಯೆಗಳು ನೀವು ವಾಸಿಸುವ ಸ್ಥಳದಲ್ಲಿದೆಯೇ?
- ನಿಮ್ಮ ಜೀವನದಲ್ಲಿ ಇವುಗಳಲ್ಲಿ ಯಾವುದು ನಿಮಗೆ ಅನಿಸುತ್ತದೆ?

☐ ನಾಚಿಕೆ　　☐ ಆಶಾರಹಿತ ಸ್ಥಿತಿ

☐ ಭಯ　　☐ ಆತಂಕ

☐ ಅಪರಾಧ　　☐ ಒಂಟಿತನ.

# ಸೃಷ್ಟಿ ಕರ್ತನು ಜಗತ್ತನ್ನು ರಕ್ಷಿಸುವ ಮತ್ತು ನವೀಕರಿಸುವ ಯೋಜನೆ



ಜಗತ್ತು ದೇವರಿಂದ ದೂರವಾದರೂ, ದೇವರು ಇನ್ನೂ ಜಗತ್ತನ್ನು ಪ್ರೀತಿಸುತ್ತಿದ್ದನು.

ತಾನು ಉಂಟು ಮಾಡಿದವರನ್ನು ಆತನು ಪ್ರೀತಿಸಿದನು. ಮತ್ತು ಒಬ್ಬ ಮನುಷ್ಯನ ಮೂಲಕ ಲೋಕವನ್ನು, ಮನುಕುಲವನ್ನು ಪ್ರೀತಿಯ ಹಾಗೂ ಮೂಲ ಉದ್ದೇಶಕ್ಕೆ ಪುನರ್ಸ್ಥಾಪಿಸುವ ಕಾರ್ಯಕ್ಕಾಗಿ ಹುಡುಕಾಡಿದನು.

ಒಂದು ದಿನ ದೇವರು ಆ ಮನುಷ್ಯನನ್ನು ಕಂಡುಕೊಂಡನು. ಅವನ ಹೆಸರು ಅಬ್ರಹಾಮನು.

ಅಬ್ರಹಾಮನು ಸತ್ಯದ ಅನ್ವೇಷಕನಾಗಿದ್ದನು. ಮತ್ತು ಅವನ ಹೃದಯವು ತೊಂದರೆಗೆ



ಈಡಾಗಿತ್ತು. ಒಂದು ದಿನ ದೇವರು ಅವನೊಂದಿಗೆ ಮಾತನಾಡಿದನು. “ಅಬ್ರಹಾಮನೇ, ನಾನು ನಿನ್ನ ಹುಡುಕಾಟವನ್ನು ಕಂಡಿದ್ದೇನೆ, ನಿನ್ನ ಹೃದಯವನ್ನು ಗಮನಿಸಿದ್ದೇನೆ. ಮತ್ತು ಈ ನಾನು ನಿನ್ನ ಬಳಿಗೆ ಬರುತ್ತೇನೆ, ನಾನೇ ಸಕಲ ಸೃಷ್ಟಿಯ ನಿಜವಾದ ದೇವರು. ನಾನು ನಿನ್ನನ್ನು ಆಶೀರ್ವದಿಸಿ ದೊಡ್ಡ ಜನಾಂಗವನ್ನಾಗಿ ಮಾಡುವೆನು. ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು. ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದ ಉಂಟಾಗುವದು.

ಇದು ಕ್ರಾಂತಿಕಾರಿಯಾಗಿತ್ತು. ಇದು ಕ್ರಿಯಾಶೀಲವಾಗಿತ್ತು. ಇದು ವ್ಯತ್ಯಾಸವಾಗಿತ್ತು.

ಇದಕ್ಕೂ ಮುಂಚೆ ಲೋಕದಲ್ಲಿ ಬೇರೆ ಯಾವ ದೇವರು ಈ ರೀತಿಯಾಗಿ ಮಾತಾಡಿದ್ದು ಇರಲಿಲ್ಲ. ಯಾಕಂದರೆ ಅವುಗಳು ಪ್ರಪಂಚದ ನಿಜವಲ್ಲದ ಸುಳ್ಳು ದೇವರುಗಳು.

ಆದರೆ ನಿಜವಾದ ದೇವರು, ಪ್ರೀತಿಯ ದೇವರು ಮಾನವಕುಲವನ್ನು ತನ್ನಷ್ಟಕ್ಕೆ ತಾನೇ ಪುನಃಸ್ಥಾಪಿಸಲು ಬಯಸಿದನು ಮತ್ತು ಭರವಸೆಯ ಮಾತುಗಳನ್ನು ಮಾತನಾಡಿದನು.

**ಅಬ್ರಹಾಮನಿಗೆ ದೇವರ ಮಾತುಗಳನ್ನು ಆದಿಕಾಂಡ 12 : 1–3ರಲ್ಲಿ ಓದಿ ಮತ್ತು ಈ ವಿಷಯಗಳ ಬಗ್ಗೆ ಯೋಚಿಸಿ**

- ದೇವರು ಅಬ್ರಹಾಮನಿಗೆ ಏನು ಹೇಳಿದನು?
- 3ನೇ ವಚನದಲ್ಲಿ ದೇವರು ಅಬ್ರಹಾಮನಿಗೆ ಹೇಳಿದ ಪ್ರಮುಖ ಭಾಗ ಯಾವುದು?
- ದೇವರು ಈ ವಾಗ್ದಾನಗಳನ್ನು ಯಾಕೆ ಮಾಡಿದನೆಂದು ನೀವು ಭಾವಿಸುತ್ತೀರಿ?

## ಲೋಕ ರಕ್ಷಕನ ಬಗ್ಗೆ ಭರವಸೆಗಳು

ಶತಮಾನಗಳು ಕಳೆದಂತೆ ಅಬ್ರಹಾಮನ ಕುಟುಂಬವು ಬೆಳೆದು ದೊಡ್ಡ ರಾಷ್ಟ್ರವಾಯಿತು. ಒಂದಾನೊಂದು ದಿನ ನಿಜವಾದ ದೇವರು ಈ ರಾಷ್ಟ್ರದ ನಾಯಕರೊಂದಿಗೆ ಮಾತಾಡಿ, "ನಾನು ಅಬ್ರಹಾಮನಿಗೆ ಮಾಡಿದ ವಾಗ್ದಾನವನ್ನು ನೆರವೇರಿಸುತ್ತೇನೆ ಮತ್ತು ಎಲ್ಲ ದುಃಖ ಮತ್ತು ವ್ಯಥೆಗಳಿಗೆ ಅಂತ್ಯ ಹಾಡುವವನು."



ಅಬ್ರಹಾಮನ ಕುಟುಂಬ, ಪ್ರವಾದಿಗಳ ಮೂಲಕ ದೇವರು ರಕ್ಷಣೆಯು ಹೇಗೆ ಬರುತ್ತದೆ – ಇದು ಒಂದು ವಿಶೇಷವಾದ ಮಗುವಿನಿಂದ ಬರುವುದಿತ್ತು.

ಒಂದು ಮಗು ನಮಗಾಗಿ ಹುಟ್ಟಿದೆಯಷ್ಟೇ, ವರದ ಮಗನು ನಮಗೆ ದೊರೆತನು, ಆಡಳಿತವು ಅವನ ಬಾಹುವಿನ ಮೇಲಿರುವದು. ಅದ್ಭುತ ಸ್ವರೂಪನು, ಆಲೋಚಕ ಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು ಎಂಬವು ಅವನ ಹೆಸರು.

ಆತನ ಮುಖಾಂತರ ಆಡಳಿತವಿರುವುದು. ರಾಜ್ಯದಲ್ಲಿ ನಿತ್ಯ ಸಮಾಧಾನವಿರುವುದು.

ಅವನು ನೀತಿ ನ್ಯಾಯಗಳ ಮೂಲಕ ಲೋಕದ ಅಂತ್ಯದವರೆಗೂ ಆಳುವನು.

ಸೇನಾಧಿಶ್ವರನಾದ ಯೆಹೋವನ ಅನುಗ್ರಹವು ಇದನ್ನು ನೇರವೇರಿಸುವದು.

# ವಾಗ್ದಾನ ಮಾಡಿದಾತನೊಬ್ಬನ ಜನನ

ಒಂದಾನೊಂದು ದಿನ ಆ ಮಗುವು ಹುಟ್ಟಿತು. ಆತನು ಹುಟ್ಟಿದ್ದು ಬೇರೆ ಮಕ್ಕಳಂತೆ ಇರಲಿಲ್ಲ, ಆತನು ಅದ್ಭುತಕಾರ್ಯದ ಮಗುವಾಗಿದ್ದನು.



ಆತನು ದೇವರ ವಿಶೇಷವಾದ ಮಗುವಾಗಿ ಲೋಕವನ್ನು ಅದರ ದುಃಖ ಸಂಕಷ್ಟಗಳಿಂದ ಬಿಡಿಸಿ ತನ್ನ ಕಡೆಗೆ ಕಿವಿಗೊಟ್ಟು ಪಾಪದಿಂದ ತಿರುಗಿಕೊಳ್ಳುವವರಿಗೆ ರಕ್ಷಣೆಗೆ ತರುವನು ಎಂಬುದಕ್ಕೆ ಗುರುತಾಗಿ ಆತನು ಕನ್ಯೆಯಲ್ಲಿ ಹುಟ್ಟಿದನು.

ಆತನ ಜನನದ ಸಮಯದಲ್ಲಿ ದೇವದೂತರು ಕಾಣಿಸಿಕೊಂಡರು. ಆತನನ್ನು ಆರಾಧಿಸಲು ಜನರು ಬಹೂ ದೂರ ಸ್ಥಳಗಳಿಂದ ಬಂದರು. ಈ ಮಗುವು ಮಾಡಲಿರುವ ಶ್ರೇಷ್ಠವಾದ ಸಂಗತಿಗಳ ಕುರಿತು ಜ್ಞಾನಿಗಳಿಂದ ಪ್ರವಾದನೆಗಳು ನುಡಿಯಲ್ಪಟ್ಟವು. ಈತನೇ ಲೋಕದ ರಕ್ಷಕನು, ಮತ್ತು ಈತನ ಹೆಸರು ಯೇಸು.

## ಯೇಸುವಿನ ಜನನದ ಬಗ್ಗೆ ಲೂಕ 2 : 1–20ರಲ್ಲಿ ಓದಿ ಮತ್ತು ಈ ವಿಷಯಗಳ ಬಗ್ಗೆ ಯೋಚಿಸಿ

- ಯೇಸು ಕನ್ಯೆಯಿಂದ ಹುಟ್ಟಿದನೆಂದು ನೀವು ಏಕೆ ಭಾವಿಸುತ್ತೀರಿ?
- ಈ ಮಗುವಿನ ಬಗ್ಗೆ ದೇವದೂತರು ಏನು ಹೇಳಿದರು?
- ಈ ಮಗು ಯಾರು ಮತ್ತು ಅವನು ಏಕೆ ಈ ಜಗತ್ತಿಗೆ ಬಂದನು?

# ವಾಗ್ದಾನ ಮಾಡಿದಾತನ ಜೀವನ

ಯೇಸು ಕ್ರಿಸ್ತನು 30 ವರ್ಷದವನಾದಾಗ ಈ ಲೋಕವನ್ನು ಪುನರ್ಸ್ಥಾಪಿಸುವ ತನ್ನ ಸೇವೆಯನ್ನು ಆರಂಭಿಸುವ ಸಮಯವಾಗಿದೆ ಎಂಬುದನ್ನು ಆತನು ತಿಳಿದಿದ್ದನು. ಆತನು "ಕಾಲವು ಪರಿಪೂರ್ಣವಾಯಿತು, ದೇವರ ರಾಜ್ಯವು ಸಮೀಪಿಸಿತು" ಎಂದು ಘೋಷಿಸುತ್ತಾ ತನ್ನ ಜನರ ನಡುವೆ ಸಂಚಾರ ಮಾಡಿದನು. ಲೋಕವು



ಕತ್ತಲೆಯಿಂದ ಲೋಕದ ರಾಷ್ಟ್ರಗಳು ಸಂಕಷ್ಟವನ್ನು ಕಂಡವು. ಈಗ ದೇವರ ರಾಜ್ಯವು ಈ ಲೋಕಕ್ಕೆ ಹಿಂದಿರುಗಿ ಮನುಕುಲಕ್ಕೆ ರಕ್ಷಣೆಯನ್ನು ತರುವ ಸಮಯವಾಗಿತ್ತು. ಆತನು ಬಲದಿಂದ ಮಾತಾಡಿದನು, ಅಧಿಕಾರದಿಂದ ಮಾತಾಡಿದನು, ಕನಿಕರದಿಂದ ಮಾತಾಡಿದನು. ಆತನು ರೋಗಿಗಳನ್ನು ಗುಣಪಡಿಸಿದನು. ಕುರುಡರಿಗೆ ದೃಷ್ಟಿ ನೀಡಿದನು. ಕುಂಟರು ನಡಿಯುವಂತೆ ಮಾಡಿದನು. ಸತ್ತು ಹೋದ ಮಕ್ಕಳು ತಮ್ಮ ದುಃಖಿತ ಹೆತ್ತವರಿಗೆ ಪುನಃ ಕೊಡಲ್ಪಟ್ಟರು. ದುರಾತ್ಮದಿಂದ ಬಾಧಿಸಲ್ಪಟ್ಟವರು ಬಿಡುಗಡೆಗೊಳಿಸಲ್ಪಟ್ಟರು. ಮತ್ತು ಎಲ್ಲದಕ್ಕಿಂದತಲೂ ಹೆಚ್ಚಾಗಿ ಆತನ ಬಳಿಗೆ ತಮ್ಮ ಪಾಪಗಳ ನಿಮಿತ್ತ ದುಃಖದಿಂದ ಬಂದವರಿಗೆ ಆತನು ಕ್ಷಮಾಪಣೆಯನ್ನು ನೀಡಿದನು. ಆತನು ಅವರಿಗೆ ನಿರೀಕ್ಷೆಯನ್ನು, ನೂತನ ಆರಂಭವನ್ನು ನೀಡಿದನು. ದೇವರ ಬೆಳಕು ಕತ್ತಲೆಯನ್ನು ತೊಲಗಿಸುತ್ತಿದ್ದಂತೆ ಆ ಪ್ರದೇಶದಲ್ಲಿ ಸಂತೋಷವು ನೆಲೆಸಿತು. ದೇವರು ಅಬ್ರಹಾಮನಿಗೆ ನೀಡಿದ ವಾಗ್ದಾನಗಳಿಗೆ ನಂಬಿಗಸ್ಥನಾಗಿದ್ದನು.

# ಯೇಸುವಿನ ಜೀವನದ ಬಗ್ಗೆ ಈ ಕಥೆಗಳನ್ನು ಓದಿ ಮತ್ತು ಈ ವಿಷಯಗಳ ಬಗ್ಗೆ ಯೋಚಿಸಿ

- ಅನಾರೋಗ್ಯದ ಮೇಲೆ ಯೇಸುವಿನ ಶಕ್ತಿಯ ಬಗ್ಗೆ ಲೂಕ 5: 12–16ರಲ್ಲಿ ಓದಿ. ಈ ಕಥೆ ನಿಮಗೆ ಏನು ಕಲಿಸುತ್ತದೆ? ಈ ಕಥೆಯನ್ನು ಯಾರು ಕೇಳಬೇಕು ಎಂದು ನಿಮಗೆ ತಿಳಿದಿದೆಯೇ?
- ದುಷ್ಟಶಕ್ತಿಗಳ ಮೇಲೆ ಯೇಸುವಿನ ಶಕ್ತಿಯ ಬಗ್ಗೆ ಲೂಕ 4: 31–37ರಲ್ಲಿ ಓದಿ. ಈ ಕಥೆ ನಿಮಗೆ ಏನು ಕಲಿಸುತ್ತದೆ? ಈ ಕಥೆಯನ್ನು ಯಾರು ಕೇಳಬೇಕು ಎಂದು ನಿಮಗೆ ತಿಳಿದಿದೆಯೇ?
- ಸಾವಿನ ಮೇಲೆ ಯೇಸುವಿನ ಶಕ್ತಿಯ ಬಗ್ಗೆ ಲೂಕ 7: 11–17ರಲ್ಲಿ ಓದಿ. ಈ ಕಥೆ ನಿಮಗೆ ಏನು ಕಲಿಸುತ್ತದೆ? ಈ ಕಥೆಯನ್ನು ಯಾರು ಕೇಳಬೇಕು ಎಂದು ನಿಮಗೆ ತಿಳಿದಿದೆಯೇ?
- ಕ್ಷಮಾಪಣೆಯ ಮೇಲೆ ಯೇಸುವಿನ ಶಕ್ತಿಯ ಬಗ್ಗೆ ಲೂಕ 5: 17–26ರಲ್ಲಿ ಓದಿ. ಈ ಕಥೆ ನಿಮಗೆ ಏನು ಕಲಿಸುತ್ತದೆ? ಈ ಕಥೆಯನ್ನು ಯಾರು ಕೇಳಬೇಕು ಎಂದು ನಿಮಗೆ ತಿಳಿದಿದೆಯೇ?

# ಯೇಸುಕ್ರಿಸ್ತನ ಮರಣ



ಆದರೆ ಎಲ್ಲರೂ ಯೇಸುವಿನೊಂದಿಗೆ ಸಂತೋಷವಾಗಿರಲಿಲ್ಲ, ಅಧಿಕಾರವು ಇನ್ನೂ ಭ್ರಷ್ಟ ಜನರ ಕೈಯಲ್ಲಿಯೇ ಇತ್ತು. ಮತ್ತು ಅಧಿಕಾರದಲ್ಲಿರುವವರು ಯೇಸು ಮಾಡುತ್ತಿದದ್ದನ್ನು ಇಷ್ಟಪಡಲಿಲ್ಲ. ಆತನು ಅವರ ಆಡಳಿತಕ್ಕೆ ಬೆದರಿಕೆಯಾಗಿದ್ದನು.

ಅವರು ಆತನನ್ನು ಭೇಟಿಯಾಡುವಂತೆ ಹಿಂಬಾಲಿಸಿ ಅಂತಿಮವಾಗಿ ಸೆರೆ ಹಿಡಿದರು. ಆತನನ್ನು ವಿಚಾರಣೆಗೆ ಒಳಪಡಿಸಿದರು. ಅಪರಾಧಗಳ ಬಗ್ಗೆ ಅನ್ಯಾಯವಾಗಿ ಆರೋಪಿಸಿದರು. ಮತ್ತು ರೋಮಾಯರ ಕ್ರೂಜೆಯ ಮೇಲೆ ಆತನನ್ನು ಜಡಿದರು.

## ಯೇಸುವಿನ ಮರಣದ ಬಗ್ಗೆ ಲೂಕ 22:54–23:56ರಲ್ಲಿ ಓದಿ ಮತ್ತು ಈ ವಿಷಯಗಳ ಬಗ್ಗೆ ಯೋಚಿಸಿ

- ನಾಯಕರು ಆತನ ವಿರುದ್ಧ ಏಕೆ ತಿರುಗಿಬಿದ್ದರು?
- “ತಂದೆಯೇ ಅವರಿಗೆ ಕ್ಷಮಿಸು, ತಾವು ಏನು ಮಾಡುತ್ತೇವೆಂಬದನ್ನು ಅರಿಯರು” ಎಂದು ಯೇಸು ಹೇಳಿದ್ದನ್ನು ನೀವು ಯಾಕೆಂದು ಆಲೋಚಿಸುತ್ತೀರಿ? ಯೇಸುವಿನೊಂದಿಗೆ ಅನ್ಯಾಯವಾಗಿ ವರ್ತಿಸಿದವರನ್ನು ಕ್ಷಮಿಸಿದರ ಬಗ್ಗೆ ನಿಮಗೆ ಏನು ಅನಿಸುತ್ತದೆ?
- ಆ ದಿನ ಯೇಸುವಿನೊಂದಿಗೆ ಇನ್ನೊಬ್ಬ ವ್ಯಕ್ತಿ ಸತ್ತನು. ಆ ಮನುಷ್ಯನು ಕರುಣೆಗಾಗಿ ಯೇಸುವನ್ನು ಕೇಳಿದನು, ಆಗ ಯೇಸು ಈ ಹೊತ್ತೇ ನನ್ನ ಸಂಗಡ ಪರದೈಸಿನಲ್ಲಿರುವಿ ಅಂದನು. ಇದು ಯೇಸುವಿನ ಬಗ್ಗೆ ನಮಗೆ ಏನು ಕಲಿಸುತ್ತದೆ?

# ಯೇಸುವಿನ ಪುನರುತ್ಥಾನ

ಕತ್ತಲೆಯು ಗೆದ್ದುಕೊಂಡಿತು ಎಂಬಂತೆ ತೋಚಿತು, ಮೂರು ದಿನಗಳ ನಂತರ ಯಾವದೋ ಒಂದು ಸಂಭವಿಸುವವರೆಗೆ ಲೋಕದೊಳಗೆ ಬಂದ ಬೆಳಕನ್ನು, ಕತ್ತಲೆಯು ವಶಪಡಿಸಿಕೊಂಡಂತೆ ಕಂಡುಬಂದಿತು.

ಸ್ತ್ರೀಯರು ಯೇಸುವಿನ ಮೃತ ದೇಹವನ್ನು ತೈಲದಿಂದ ಅಭಿಷೇಕಿಸಲು ಸಮಾಧಿಗೆ ಹೋದರು. ಆದರು ಅವರು ಅಲ್ಲಿಗೆ ಬಂದಾಗ ಸಮಾಧಿಯು ಬರಿದಾಗಿತ್ತು. ದೇವದೂತರು ಅವರಿಗೆ ಕಾಣಿಸಿಕೊಂಡು ಶ್ರೇಷ್ಠವಾದ ಸುದ್ದಿಯನ್ನು ಘೋಷಿಸಿದರು.



ಯೇಸುಕ್ರಿಸ್ತನು ಮರಣದಿಂದ ಎದ್ದಿದ್ದನು.

ಯೇಸುಕ್ರಿಸ್ತನು ಪುನಃ ಜೀವಿಸುವಾತನು ಆಗಿದ್ದನು. ಮತ್ತು ಆತನು ಇನ್ನೆಂದು ಮರಣವನ್ನು ಅನುಭವಿಸದ ನೂತನವಾದ ನಶಿಸಿ ಹೋಗದ ದೇಹದಲ್ಲಿ ಜೀವಿಸುವಾತನಾಗಿದ್ದನು. ಯೇಸುಕ್ರಿಸ್ತನು ಕತ್ತಲೆಯಿಂದ ಸೋಲಿಸಲ್ಪಡಲಿಲ್ಲ. ಅದರ ಬದಲಾಗಿ ಆತನು ಕತ್ತಲೆಯನ್ನು ಜಯಿಸಿದನು.

ಕ್ರೂಜೆಯ ಮೇಲಿನ ಆತನ ಮರಣವು ಆತನ ಸೋಲಾಗಿರಲಿಲ್ಲ. ಕ್ರೂಜೆಯ ಮೇಲೆ ಆತನು ಲೋಕದ ಪಾಪದ ಕ್ರಯವನ್ನು ಕಟ್ಟಿದ್ದರಿಂದ ಅದು ಆತನ ಜಯವಾಗಿತ್ತು.

ಮತ್ತು ಆತನ ಪುನರುತ್ಥಾನದಲ್ಲಿ ಆತನು ಅಬ್ರಹಾಮನಿಗೆ ವಾಗ್ದಾನ ಮಾಡಿದ ಹಾಗೆಯೇ ಎಲ್ಲಾ ಸಂಗತಿಗಳನ್ನು ಪುನಃಸ್ಥಾಪಿಸುವ ದೇವರ ಸೃಷ್ಟಿಯನ್ನು ಉದ್ಘಾಟಿಸಿದನು.

## ಯೇಸುವಿನ ಪುನರುತ್ಥಾನದ ಬಗ್ಗೆ

## ಲೂಕ 24:1–43ರಲ್ಲಿ ಓದಿ ಮತ್ತು ಈ ವಿಷಯಗಳ ಬಗ್ಗೆ ಯೋಚಿಸಿ

- ಯೇಸು ಪುನರುತ್ಥಾನ ಹೊಂದಿದಾಗ ಮೊದಲು ಯಾರಿಗೆ ಕಾಣಿಸಿಕೊಂಡನು?
- ಯೇಸು ಇಬ್ಬರೊಂದಿಗೆ ಎಮ್ಮಾವು ಹಳ್ಳಿಗೆ ಪ್ರಯಾಣಿಸುತ್ತಾ ಮಾತನಾಡುವಾಗ ಅವರಿಗೆ ಏನು ಕಲಿಸುತ್ತಿದ್ದನು?
- ಯೇಸು ಶಿಷ್ಯರಿಗೆ ಕಾಣಿಸಿಕೊಂಡು ಅವರೊಂದಿಗೆ ಅಹಾರವನ್ನು ತೆಗೆದುಕೊಂಡದ್ದರ ಬಗ್ಗೆ ನೀವು ಏನು ಭಾವಿಸುತ್ತೀರಿ?
- ಪುರುತ್ಥಾನಗೊಂಡ ಯೇಸು "ನಿಮಗೆ ಸಮಾಧಾನವಾಗಲಿ" ಅಂದನು. ಯೇಸು ನಿಮ್ಮ ಜೀವನದಲ್ಲಿ ಕೂಡ ನಿಮಗೆ ಸಮಾಧಾನವಾಗಲಿ ಎಂದು ಹೇಳುತ್ತಾನೆ ಎಂಬುದನ್ನು ನಂಬುತ್ತೀರೋ?
- ಪುನರುತ್ಥಾನಗೊಂಡ ಯೇಸುವನ್ನು ಹಾಗೂ ಆತನ ಶಾಂತಿಯ ಬಗ್ಗೆ ಬೇರೆ ಯಾರು ಕೇಳಬೇಕು?

# ಯೇಸುವಿನ ಮರಣ ಮತ್ತು ಪುನರುತ್ಥಾನ ನಿಮಗಾಗಿ, ನಿಮ್ಮ ಕುಟುಂಬಕ್ಕಾಗಿ, ಮತ್ತು ನಿಮ್ಮ ರಾಷ್ಟ್ರಕ್ಕಾಗಿ ಏನು ತಿಳಿಸುತ್ತದೆ

## ಯೇಸುವಿನ ಮರಣ

ದೇವರ ವಾಕ್ಯವು ನಮಗೆ ಯೇಸುವಿನ ಮರಣ ಒಂದು ಅಪಘಾತ ಅಥವಾ ದುರಂತ ಅಲ್ಲ ಎಂದು ನಮಗೆ ಕಲಿಸುತ್ತದೆ. ಆತನ ಮರಣವು ನಮ್ಮ ಪಾಪಗಳಿಗಾಗಿ ತ್ಯಾಗವಾಗುವುದು ನಮ್ಮನ್ನು ಕ್ಷಮಿಸಬಹುದೆಂಬ ದೇವರ ಯೋಜನೆಯಾಗಿತ್ತು ಎಂದು ಅದು ನಮಗೆ ಕಲಿಸುತ್ತದೆ.

ಈ ಕೆಳಗಿನ ಎರಡು ದೇವರ ವಾಕ್ಯವನ್ನು ಓದಿರಿ

"ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ"

– ರೋಮಾ 3:23

"ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ" – ರೋಮಾ 6:23

ನಾವೆಲ್ಲರು ಪಾಪಮಾಡಿ ದೇವರಿಂದ ದೂರ ಹೋಗಿದ್ದೇವೆಂದು ದೇವರ ಪರಿಶುದ್ಧ ವಾಕ್ಯವು ನಮಗೆ ಕಲಿಸುತ್ತದೆ. ಪಾಪವು ದೇವರಿಂದ ನಮ್ಮನ್ನು ದೂರ ಮಾಡಿ ಲೋಕಕ್ಕೆ ಮರಣವನ್ನು ತಂದಿದೆ ಎಂದು ಅದು ನಮಗೆ ಕಲಿಸುತ್ತದೆ. ಅದು ಇನ್ನೂ ನಮಗೆ ತಿಳಿಸುವುದೇನೆಂದರೆ ಯೇಸು ನಮ್ಮ ಪಾಪಗಳ ದಂಡನೆಯನ್ನು ಪಾವತಿಸಿದರಿಂದ ಆತನ ಮೂಲಕ ನಾವು ಕ್ಷಮಾಪಣೆಯನ್ನು ಮತ್ತು ಜೀವವನ್ನು ಹೊಂದಬಹುದು.

ನಮ್ಮ ಬದಲಾಗಿ ಸಾಯುತ್ತಿರುವ ಯೇಸುವಿನ ಬಗ್ಗೆ ಈ ಹೇಳಿಕೆಯನ್ನು ಓದಿರಿ

> *"ಕ್ರಿಸ್ತನು ಸಹ ನೀತಿವಂತನಾಗಿದ್ದು ಅನೀತಿವಂತರಿಗೋಸ್ಕರ ಪ್ರಾಣಕೊಟ್ಟು ನಮ್ಮನ್ನು ದೇವರ ಬಳಿಗೆ ಸೇರಿಸುವದಕ್ಕಾಗಿ ಒಂದೇ ಸಾರಿ ಪಾಪ ನಿವಾರಣಕ್ಕೋಸ್ಕರ ಬಾಧೆಪಟ್ಟು ಸತ್ತನು".*
>
> *– 1 ಪೇತ್ರ 3:18*

ಯೇಸು ನಿಮ್ಮ ಪಾಪಗಳನ್ನು ತನ್ನ ಮೇಲೆ ತೆಗೆದುಕೊಂಡು ಬೆಲೆ ಕೊಟ್ಟನು. ಆತನು ನಿಮ್ಮ ಹಾಗೂ ಕುಟುಂಬ, ನಿಮ್ಮ ರಾಷ್ಟ್ರ, ಮತ್ತು ಜಗತ್ತಿನ ಪಾಪಗಳನ್ನು ತಾನೇ ತೆಗೆದುಕೊಂಡನು.



ನೀವು ಆಲೋಚಿಸಬೇಕಾದ ಒಂದು ಪ್ರಶ್ನೆ ಇಲ್ಲಿದೆ – ಯೇಸು ನಿಮ್ಮ ಹಾಗೂ ಕುಟುಂಬ, ನಿಮ್ಮ ರಾಷ್ಟ್ರ, ಮತ್ತು ಜಗತ್ತಿನ ಪಾಪಗಳಿಗಾಗಿ ಮರಣ ಹೊಂದಿದ್ದನ್ನು ನೀವು ಪರಿಗಣಿಸಿದಾಗ ನಿಮಗೆ ಏನು ಅನಿಸುತ್ತದೆ?

## <u>ಯೇಸುವಿನ ಪುನರುತ್ಥಾನ</u>

ಯೇಸು ಕ್ರೂಜೆಯಲ್ಲಿ ಸತ್ತು 3ನೇ ದಿನದಲ್ಲಿ ಸತ್ತವರೊಳಗಿಂದ ಎದ್ದು ಬಂದಾಗ ಅದು ನಮಗೆ ತೋರಿಸುವುದೇನೆಂದರೆ ಆತನ ಕ್ರೂಜೆಯ ಮರಣವು ನಮ್ಮ ಪಾಪಗಳ ಸಂಪೂರ್ಣ ಬೆಲೆಯು ಭರಿಸಲ್ಪಟ್ಟು ನಾವು ತಿರುಗಿ ದೇವರ ಬಳಿಗೆ ಬರುವಂತಾಯಿತು. ನಮ್ಮ ಪಾಪದ ಸಾಲವು ಸಲ್ಲಿಸಲಾಗಿದೆ! ಈ ಮೂಲಕ ನಾವು ಕ್ಷಮಿಸಲ್ಪಟ್ಟು ದೇವರೊಂದಿಗೆ ಪುನಃಸ್ಥಾಪಿಸಲ್ಪಡಬಹುದು.

ಯೇಸು ಮರಣಹೊಂದಿ, ಮೂರು ದಿನಗಳ ನಂತರ ಪುನರುತ್ಥಾನ ಹೊಂದದ್ದು, ಆತನು ಯಾರಾಗಿದ್ದನು ಎಂಬ ಸತ್ಯವನ್ನು ನಮಗೆ ತಿಳಿಸುತ್ತಿದೆ. ಈ ಲೋಕದಲ್ಲಿ ನಿಜವಾದ

ದೇವರಾಗಿ, ವಾಗ್ದಾನಮಾಡಿದ ಎಲ್ಲಾ ಜನರ ರಕ್ಷಕನಾಗಿ ಈ ಲೋಕದೊಳಗೆ ಬಂದನು. ಆತನು ನಿಮ್ಮ ದೇವರಾಗಿಯೂ, ರಕ್ಷಕನಾಗಿಯೂ ಇರಲು ಬಯಸುತ್ತಾನೆ!

ದೇವರ ಪರಿಶುದ್ಧ ಗ್ರಂಥವು ಈ ವಾಗ್ದಾನಗಳನ್ನು ಮಾಡುತ್ತದೆ

"*ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆ ಮಾಡಿಕೊಂಡು* ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ. ಕರ್ತನ ನಾಮವನ್ನು ಹೇಳಿ ಕೊಳ್ಳುವವರೆಲ್ಲರಿಗೆ *ರಕ್ಷಣೆಯಾಗುವದೆಂದು* ಬರದದೆ." – ರೋಮಾ 10:9,13



ಯೇಸುವನ್ನು ನಿನ್ನ ರಕ್ಷಕನಾಗಿ ಹಾಗೂ ಕರ್ತನಾಗಿ ಸ್ವೀಕರಿಸಲು ಬಯಸುವೆಯಾ? ಯೇಸು ಜೀವಿಸುತ್ತಿದ್ದಾನೆ. ಆತನು ನಿನ್ನನ್ನು ಪ್ರೀತಿಸುತ್ತಾನೆ. ಆತನು ನಿನ್ನ ಪಾಪಗಳಿಗಾಗಿ ಸತ್ತನು. ಆತನು ನಿನ್ನನ್ನು ಆಶೀರ್ವದಿಸಲು ಪುನರುತ್ಥಾನವನು ಹೊಂದಿದನು. ಈ ಮಾತುಗಳನ್ನು ನಿನ್ನಿಂದ ಕೇಳಲು ಆತನು ಕಾದಿರುವನು:

"ಪ್ರೀತಿಯ ಯೇಸು ಸ್ವಾಮಿ, ಈ ಲೋಕಕ್ಕೆ ನೀನು ಬಂದಿರುವದಕ್ಕಾಗಿ ವಂದನೆಗಳು. ಜನರನ್ನು ಪ್ರೀತಿಸುತ್ತಿರುವದಕ್ಕಾಗಿ ವಂದನೆಗಳು. ನೀನು ರೋಗಿಗಳನ್ನು ವಾಸಿ ಮಾಡಿದಿ. ನೀನು ದುರಾತ್ಮ ಪೀಡಿತರನ್ನು ಬಿಡಿಸಿರುವಿ. ಸತ್ತವರನ್ನು ಎಬ್ಬಿಸಿರುವಿ. ಪಾಪಿಗಳಿಗೆ ಕನಿಕರವನ್ನು ತೋರಿಸಿರುವಿ. ಇವೆಲ್ಲವುಗಳಿಗಿಂತಲೂ ನನ್ನ ಪಾಪಗಳಿಗಾಗಿ ಮರಣ ಹೊಂದಿರುವಿ ಎಂಬುದನ್ನು ಜ್ಞಾಪಿಸಿಕೊಳ್ಳುತ್ತೇನೆ. ದಯಮಾಡಿ, ನನ್ನ ಎಲ್ಲಾ ತಪ್ಪುಗಳನ್ನು ಕ್ಷಮಿಸು. ನೀನು ನನ್ನ ಜೀವಿತದೊಳಗೆ ಬಂದು ನನ್ನ ಕರ್ತನಾಗಿ, ನನ್ನ ರಕ್ಷಕನಾಗಿ ಇರಬೇಕೆಂದು ಬಯಸುತ್ತೇನೆ. ನಾನು ನಿನ್ನನ್ನು ಹಿಂಬಾಲಿಸುತ್ತಾ, ಇತರರಿಗೆ ನಿನ್ನನ್ನು ಕುರಿತು ಹೇಳಬೇಕೆಂದು ಬಯಸುತ್ತೇನೆ! ಆಮೆನ್!"

# ಯೇಸುವಿನ ಪುನರುತ್ಥಾನದ ನಂತರ

ಯೇಸುವಿನ ಪುನರುತ್ಥಾನದ ನಂತರ, ಆತನು ತನ್ನ ಶಿಷ್ಯರನ್ನು ಒಟ್ಟುಗೂಡಿಸಿ ರೋಮಾಯರು ತನ್ನನ್ನು ಶಿಲುಬೆಗೆ ಹಾಕಿದಾಗ ತನ್ನ ಕೈಗಳಿಗೂ ಕಾಲುಗಳಿಗೂ ಉಂಟಾದ ಗಾಯಗಳನ್ನು ತೋರಿಸಿದನು.



ಆತನಿಗೆ ಸಂಭವಿಸಿದ ಎಲ್ಲಾ ಅನ್ಯಾಯವೂ ದೇವರ ಶಕ್ತಿಯಿಂದ ಜಗತ್ತಿನ ರಕ್ಷಣೆಗೆ ಕಾರಣವಾಯಿತೆಂದು ಆತನು ಅವರಿಗೆ ವಿವರಿಸಿದನು. ಜಗತ್ತಿನ ಪಾಪಕ್ಕಾಗಿ ಆತನು ಶಿಲುಬೆಯಲ್ಲಿ ಮರಣಹೊಂದಿದನು. ಮಾನವರು ದೇವರಿಗೆ ವಿರೋಧವಾಗಿ ಮಾಡಿದ ಪಾಪಕ್ಕಾಗಿ ದಂಡವನ್ನು ಕಟ್ಟಿದನು. ಮಾನವಕುಲವು ನ್ಯಾಯ ತೀರ್ಪಿಗೆ ಗುರಿಯಾಯಿತು. ಆದರೆ, ಯೇಸು ಕ್ರಿಸ್ತನು ಮಾನವಕುಲಕ್ಕೆ ಬರಬೇಕಾದ ಶಿಕ್ಷೆಯನ್ನು ತನ್ನ ಮೇಲೆ ಹಾಕಿಕೊಂಡನು. ಈಗ ಮಾನವರು ತಾವು ಮಾಡಿರುವ ಪಾಪಗಳಿಂದ ಕ್ಷಮೆಯನ್ನು ಹೊಂದಿಕೊಂಡು, ತಮ್ಮ ಸೃಷ್ಟಿಕರ್ತನ ಬಳಿಗೆ ತಿರುಗಿ ಕೊಳ್ಳಲು ಸಾಧ್ಯವಾಯಿತು.

ಯೇಸು ತನ್ನನ್ನೇ ಯಜ್ಞವಾಗಿ ಸಮರ್ಪಿಸಿಕೊಂಡನು. ಆದದರಿಂದ ಇನ್ನು ಪ್ರಾಣಿಗಳ ಯಜ್ಞವು ಅವಶ್ಯವಿಲ್ಲ. ಯೇಸುವು ಮರಣವನ್ನು ಜಯಿಸಿ, ಸಮಾಧಿಯಿಂದ ಎದ್ದು ಬಂದದ್ದರಿಂದ ಮರಣದ ಹಿಂದೆ ಇರುವುದರ ಕುರಿತ ಭಯವು ಅವಶ್ಯವಿಲ್ಲ.

ರೋಗಿಗಳನ್ನು ವಾಸಿಮಾಡಿ, ಪಾಪಿಗಳನ್ನು ಕ್ಷಮಿಸಿದಾತನು ಈಗ ಎಲ್ಲಾ ಶತ್ರುಗಳನ್ನು ಜಯಿಸಿ, ನಿಜವಾದ ಲೋಕ ರಕ್ಷಕನಾಗಿ ಸಮಾಧಿಯಿಂದ ಪ್ರಕಟವಾದನು.

ಬಳಿಕ ಆತನು ತನ್ನ ಹಿಂಬಾಲಕರಿಗೆ “ನಿಮ್ಮನ್ನು ಸೇವೆಗಾಗಿ ಕಳುಹಿಸುತ್ತೇನೆ ಎಂದು ಹೇಳಿದರು.



ಅವರು ಜಗತ್ತಿನ ಮನುಷ್ಯರಲ್ಲಿ, ಕುಟುಂಬಗಳಲ್ಲಿ, ಸಮುದಾಯದಲ್ಲಿ ಹಾಗೂ ಜನಾಂಗಗಳಲ್ಲಿ ಆತನನ್ನು ಕುರಿತು ಹೇಳುವದರಿಂದ ಹೊಸತನವನ್ನು ತಂದರು.

ಆತನು ಜನರ ಪಾಪಗಳನ್ನು ಕ್ಷಮಿಸುತ್ತಾನೆಂದು, ಆತನ ಮೂಲಕ ಜೀವವನ್ನು ಹೊಂದಿಕೊಂಡು, ದೊಡ್ಡ ದುರಂತದಿಂದ ಕಳೆದುಕೊಂಡ ಎಲ್ಲವನ್ನೂ ಈಗ ಪಡೆದುಕೊಳ್ಳಬಹುದು ಎಂದು ಹೇಳುವುದೇ ಅವರ ಸೇವೆಯಾಗಿತ್ತು. ಜನರು ಯೇಸುಕ್ರಿಸ್ತನ ಮೂಲಕ ನಿಜವಾದ ದೇವರನ್ನು ಕಂಡುಕೊಂಡದ್ದರಿಂದ ದೇವರಿಗೂ ಮನುಷ್ಯರಿಗೂ ಮಧ್ಯದಲ್ಲಿದ್ದ ಕತ್ತಲೆ ನೀಗಿತು.

ಯೇಸು ತನ್ನ ಹಿಂಬಾಲಕರಿಗೆ ಕಲಿಸಿದ ಹಾಗೆ ಜನರು ಒಬ್ಬರಿಗೊಬ್ಬರು ಸೇವೆ ಮಾಡುವದರಿಂದ  ಮಾನವನ ಹಾಗೂ ಮಾನವನ ಮಧ್ಯದಲ್ಲಿರುವ ಕತ್ತಲೆ ನೀಗಿಸಲ್ಪಡುವದು.

ಶುದ್ಧೀಕರಿಸುವ, ವಾಸಿಮಾಡುವ, ಮತ್ತು ಉಜ್ಜೀವಿಸುವ ಯೇಸುವಿನ ಆತ್ಮದಿಂದ ಪ್ರತಿಯೊಬ್ಬ ಮನುಷ್ಯರಲ್ಲಿರುವ ಕತ್ತಲೆಯು ನೀಗಿಸಲ್ಪಡುತ್ತದೆ.

ಈ ಸೃಷ್ಠಿಯ ಮೇಲಿರುವ ಶಾಪವು ಯೇಸು ತಿರುಗಿ ಬರುವಾಗ ನೀಗಿಸಲ್ಪಟ್ಟು, ಸಂತೋಷವಾಗಿಯೂ, ಸಮಾಧಾನವಾಗಿಯೂ, ಸುಂದರವಾಗಿಯೂ ಇರುವ ಒಂದು ಹೊಸ ಭೂಮಿಯಾಗಿ ಮಾರ್ಪಡುತ್ತದೆ.

# ಈಗ ಯೇಸು ನಿಮಗಾಗಿ ಏನನ್ನು ಬಯಸುತ್ತಾನೆ

ನೀವು ಶಕ್ತರಾಗಿ, ಪ್ರಬುದ್ಧರಾಗಿ ಬೆಳೆದು ಆತನ ಶಿಷ್ಯರಾಗಬೇಕೆಂದು ಆತನು ಬಯಸುತ್ತಾನೆ. ನೀವು ಯೇಸುವನ್ನು ನಿಮ್ಮ ಹೃದಯದೊಳಗೆ ಆಹ್ವಾನಿಸುವಾಗ ಆತನು ಬರುವನು, ಮತ್ತೆ ಆತನು ನಿಮ್ಮ ಜೀವನದ ಪ್ರತಿಯೊಂದು ಭಾಗಗಳನ್ನೂ ತನ್ನ ಆತ್ಮದಿಂದ ಸಂಪೂರ್ಣವಾಗಿ ಬದಲಾಯಿಸಲು ಬಯಸುತ್ತಾನೆ. ನೀವು ಯೇಸುವಿನೊಂದಿಗೆ ನಿಮ್ಮ ಸಂಬಂಧ ಬೆಳೆಯಲು ಏನು ಮಾಡಬಹುದು ಎಂಬುದು ಇಲ್ಲಿ ತಿಳಿಸಲ್ಪಟ್ಟಿದೆ.

**1. ಯೇಸುವನ್ನು ಹಿಂಬಾಲಿಸುವ ಒಬ್ಬರಿಂದ ದೀಕ್ಷಾಸ್ನಾನವನ್ನು ಪಡೆದುಕೊಳ್ಳಿರಿ.**



ದೀಕ್ಷಾಸ್ನಾನವೆಂಬುದು ನಾವು ಮರಣವನ್ನು ದಾಟಿ ಜೀವವನ್ನು ಹೊಂದಿಕೊಂಡು ಆತನ ಶಿಷ್ಯರಾಗಿದ್ದೇವೆಂಬುದಕ್ಕೆ ಸಂಕೇತವಾಗಿದೆ. ದೀಕ್ಷಾಸ್ನಾನವೆಂಬುದು ನಮಗಾಗಿ ಆತನು ಶಿಲುಬೆಯ ಮರಣವನ್ನು ಹೊಂದಿದನು ಹಾಗೂ ಆತನು ನಮಗೆ ಜೀವವನ್ನು ಕೊಡಲು ಪುನರುತ್ಥಾನ  ಹೊಂದಿದನೆಂದು ತೋರಿಸುವ ಒಂದು ನಂಬಿಕೆಯ ಮೆಟ್ಟಲಾಗಿದೆ. "ನೀವು ಹೊರಟು ಹೋಗಿ .. ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನಮಾಡಿಸಿ.." ಮತ್ತಾಯ 28:18–20

**2. ಯೇಸು ನಿಮ್ಮನ್ನು ಸಂಪೂರ್ಣವಾಗಿ ತನ್ನ ಆತ್ಮದಿಂದ ತುಂಬಿಸುವಂತೆ ಬೇಡಿಕೊಳ್ಳಿರಿ:**

ನಿಮ್ಮನ್ನು ಹೊಸ ಮನುಷ್ಯರಾಗಿ ಮಾರ್ಪಡಿಸಿ, ಇತರರಿಗೆ ಸಾಕ್ಷಿಗಳಾಗಿ ನಿಲ್ಲಿಸಲು ಯೇಸುವನ್ನು ಹಿಂಬಾಲಿಸಿದವರಲ್ಲಿ ಒಬ್ಬನಾದ

ಪೌಲನು – "ಯಾವಾಗಲೂ ಆತ್ಮದಿಂದ ತುಂಬಿದವರಾಗಿರಿ, ಒಬ್ಬರಿಗೊಬ್ಬರು ಕನಿಕರದಿಂದ ಮಾತಾನಾಡಿಸಿರಿ, ದೇವರಿಗೆ ಕೃತಜ್ಞತಾಸ್ತುತಿ ಮಾಡಿರಿ, ಎಲ್ಲರೊಂದಿಗೂ ತಾಳ್ಮೆಯಿಂದಿರಿ." ಎಂದು ಹೇಳಿದನು.

### 3. ಪ್ರತಿದಿನ ದೇವರ ವಾಕ್ಯದಿಂದ ಕಲಿತುಕೊಳ್ಳಿರಿ.

– ಮತ್ತಾಯ, ಮಾರ್ಕ್, ಲೂಕ ಹಾಗೂ ಯೋಹಾನ ಪುಸ್ತಕಗಳಿಂದ ಯೇಸುವಿನ ಜೀವನವನ್ನು ಕುರಿತು ಕಲಿತುಕೊಳ್ಳಿರಿ.

– ಯೇಸುವಿನ ಆದಿ ಶಿಷ್ಯರನ್ನು ಕುರಿತು ಅಪೊಸ್ತಲರ ಕೃತ್ಯಗಳೆಂಬ ಪುಸ್ತಕದಿಂದ ಕಲಿತುಕೊಳ್ಳಿರಿ.

– ಯೇಸುವನ್ನು ಹಿಂಬಾಲಿಸುವವರು ತಮಗೆ ಬರುವ ಶೋಧನೆಗಳನ್ನು ಜಯಿಸಿ, ನಂಬಿಕೆಯಲ್ಲಿ ಬೆಳೆಯಲು ಯೇಸುವನ್ನು ಹಿಂಬಾಲಿಸಿದ ನಾಯಕರಿಂದ ಬರೆಯಲ್ಪಟ್ಟ ಪತ್ರಿಕೆಗಳಿಂದ ಕಲಿತುಕೊಳ್ಳಿರಿ.



– ಕರ್ತನಾದ ಯೇಸು ಎಲ್ಲಾ ಶೋಧನೆಗಳನ್ನು ಜಯಿಸಿ, ಎಲ್ಲವನ್ನೂ ಪುನಃಸ್ಥಾಪಿಸಿರುವದನ್ನು ಕುರಿತು ಪ್ರಕಟನೆ ಪುಸ್ತಕದಿಂದ ಕಲಿತುಕೊಳ್ಳಿರಿ.

### 4. ಪ್ರತೀದಿನ ಎಲ್ಲಾ ವಿಷಯಗಳಿಗಾಗಿ ದೇವರಿಗೆ ಪ್ರಾರ್ಥಿಸಿರಿ!

– ದೇವರು ನಿನ್ನನ್ನು ತನ್ನ ಮಗುವಿನಂತೆ ಪ್ರೀತಿಸುತ್ತಾನೆ. ನಿನ್ನ ಅಗತ್ಯವನ್ನು, ಆಶೆಗಳನ್ನು, ಪ್ರತಿಯೊಂದನ್ನು ಆತನಿಗೆ ತಿಳಿಸಬೇಕೆಂದು ಬಯಸುತ್ತಾನೆ.

"ಯಾವ ಸಂಬಂಧವಾಗಿಯೂ ಚಿಂತೆಮಾಡದೆ ಸರ್ವವಿಷಯದಲ್ಲಿ ದೇವರ ಮುಂದೆ ಕೃತಜ್ಞತಾಸ್ತುತಿಯನ್ನೂ ಪ್ರಾರ್ಥನೆ ವಿಜ್ಞಾಪನೆಗಳನ್ನೂ ಮಾಡುತ್ತಾ ನಿಮಗೆ ಬೇಕಾದದ್ದನ್ನು ತಿಳಿಯಪಡಿಸಿರಿ.

ಆಗ ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿಯು ನಿಮ್ಮ ಹೃದಯಗಳನ್ನೂ ಯೋಚನೆಗಳನ್ನೂ ಕ್ರಿಸ್ತ ಯೇಸುವಿನಲ್ಲಿ ಕಾಯುವದು." – **ಫಿಲಿಪ್ಪಿ 4:6–7**

## 5. ಯೇಸುವಿನ ಹಿಂಬಾಲಕರೊಂದಿಗೆ ಕ್ರಮವಾಗಿ ಅನ್ಯೋನ್ಯತೆಯನ್ನು ಹೊಂದಿಕೊಂಡಿರಿ.

ನಾವು ಬೆಳೆಯಲು, ನಮಗಾಗಿ ಪ್ರಾರ್ಥಿಸಲು, ನಮಗೆ ಆಲೋಚನೆಯನ್ನು ಹೇಳಲು, ನಮ್ಮನ್ನು ಪ್ರೀತಿಸಲು ನಮಗೆ ಇತರ ವಿಶ್ವಾಸಿಗಳ ಸಹಾಯಬೇಕಾಗಿದೆ. ನಾವೂ ಸಹ ಅವರಿಗೆ ಅದನ್ನೇ ಮಾಡಬೇಕು.

"ನಾವು ಪರಸ್ಪರ ಹಿತಚಿಂತಕರಾಗಿದ್ದು ಪ್ರೀತಿಸುತ್ತಿರಬೇಕಂತಲೂ ಸತ್ಕಾರ್ಯ ಮಾಡಬೇಕೆಂತಲೂ ಒಬ್ಬರನ್ನೊಬ್ಬರು ಪ್ರೇರೇಪಿಸೋಣ. ಸಭೆಯಾಗಿ ಕೂಡಿಕೊಳ್ಳುವದನ್ನು ಕೆಲವರು ರೂಢಿಯಾಗಿ ಬಿಟ್ಟಿರುವ ಪ್ರಕಾರ ನಾವು ಬಿಟ್ಟುಬಿಡದೆ ಒಬ್ಬರನ್ನೊಬ್ಬರು ಎಚ್ಚರಿಸೋಣ. ಕರ್ತನ ಪ್ರತ್ಯಕ್ಷತೆಯ ದಿನವು ಸಮೀಪಿಸುತ್ತಿದೆ." ಇಬ್ರಿಯ 10:24–25


## 6. ಇತರರಿಗಾಗಿ ಪ್ರಾರ್ಥಿಸಿರಿ ಹಾಗೂ ಯೇಸುವಿನೊಂದಿಗೆ ನಿಮಗಿರುವ ಸಂಬಂಧವನ್ನು ಅವರಿಗೆ ತಿಳಿಸಿರಿ.

ಯೇಸು ಹೇಳಿದ್ದು:

**"ಕ್ರಿಸ್ತನು ಶ್ರಮೆಪಟ್ಟು ಸತ್ತು ಮೂರನೆಯ ದಿನದಲ್ಲಿ ಜೀವಿತನಾಗಿ ಎದ್ದು ಬರುವನೆಂತಲೂ ಪಾಪಪರಿಹಾರಕ್ಕೋಸ್ಕರ ದೇವರ ಕಡೆಗೆ ತಿರುಗಿಕೊಳ್ಳಬೇಕೆಂಬ ಮಾತು ಯೆರೂಸಲೇಮು ಮೊದಲುಗೊಂಡು ಸಮಸ್ತ ದೇಶದವರಿಗೂ ಆತನ ಹೆಸರಿನಲ್ಲಿ ಸಾರಲ್ಪಡುವದೆಂತಲೂ ಬರೆದದೆ. ಇವುಗಳ ವಿಷಯದಲ್ಲಿ ನೀವೇ ಸಾಕ್ಷಿ ಹೇಳುವವರಾಗಿದ್ದೀರಿ." ಲೂಕ 24:46–48**

# ಯೇಸು ಈ ಲೋಕದ ನಿಜವಾದ ಸತ್ಯ ದೇವರು,

# ಹಾಗೂ ನಿನ್ನ ದೇವರು!



ಯೇಸು ಪುನನರುತ್ಥಾನ ಹೊಂದಿದ ನಂತರ ಆತನ ಶಿಷ್ಯರನ್ನು ಒಟ್ಟಾಗಿ ಸೇರಿಸಿ, ಆತನು ಈ ಲೋಕಕ್ಕೆ ಬಂದ ಕಾರಣ ಪ್ರತಿಯೊಬ್ಬರನ್ನು ನವೀಕರಿಸಲ್ಪಟ್ಟು ಸೃಷ್ಠಿಕರ್ತನೊಂದಿಗೆ ಸಂಧಾನವಾಗಬಹುದು ಎಂಬುದನ್ನು ಜಗತ್ತಿಗೆ ಸಾರುವ ಕೆಲಸವನ್ನು ಅವರಿಗೆ ಕೊಟ್ಟರು.


ನಂತರ ಆತನು ಪರಲೋಕಕ್ಕೆ ಏರಿಹೋಗಿ ಭೂಮ್ಯಾಕಾಶಗಳಿಗೆ ಒಡೆಯನಾಗಿ ಸಿಂಹಾಸನಾರೂಢನಾಗಿರುವನು. ಈಗ ಲೋಕದ ನಿಜದೇವರಾಗಿ ಮನುಷ್ಯನು ಮಹಾ ದುರಂತದಿಂದ ಕಳೆದುಕೊಂಡದ್ದನ್ನು ತಿರುಗಿ ಬಿಡಿಸಿಕೊಡುವ ರಕ್ಷಕನಾಗಿದ್ದಾನೆಂಬ ಶುಭವಾರ್ತೆಯನ್ನು ಸಾರುವದಕ್ಕಾಗಿ ಅವರಿಗೆ ಅಧಿಕಾರವನ್ನು ಕೊಟ್ಟು ತನ್ನ ಶಿಷ್ಯರನ್ನು ಮುನ್ನಡಿಸುತ್ತಿದ್ದಾನೆ.




ಇಡೀ ಲೋಕವು ಕತ್ತಲೆಯಲ್ಲಿದ್ದ ಹಿಂದಿನ ದಿನಗಳಲ್ಲಿ ದೇವರು ಅಬ್ರಹಾಮನಿಗೆ ಕೊಟ್ಟ ವಾಗ್ದಾನಗಳಲ್ಲಿ ನಂಬಿಗಸ್ತನಾಗಿದ್ದನು. ಅಬ್ರಹಾಮನ ಸಂತತಿಯಲ್ಲಿ ಬಂದ ನಜರೇತಿನ ಯೇಸು, ಇಡೀ ಜಗತ್ತನ್ನು ತಾನು ಹೇಳಿದಂತೆಯೇ ಆಶೀರ್ವದಿಸುತ್ತಾನೆ. ಲೆಕ್ಕವಿಲ್ಲದಷ್ಟು ಜನರು

ಈ ಭರವಸೆಯ, ಸಂತೋಷದ, ಜೀವಕೊಡುವ ಸಂದೇಶವನ್ನು ಸ್ವೀಕರಿಸಿದ್ದಾರೆ, ಹಾಗೂ ಸಾರುತ್ತಿದ್ದಾರೆ.

2000 ಕ್ಕಿಂತಲೂ ಹೆಚ್ಚಿನ ವರ್ಷಗಳು ಕಳೆದು ಹೋದರೂ ದೇವರ ರಕ್ಷಣಾ ಸುವಾರ್ತೆಯ ಧ್ವನಿಯು ಇಡೀ ಜಗತ್ತಿನಲ್ಲಿ ಪ್ರತಿಧ್ವನಿಸುತ್ತಾ ಈಗ ನಿನ್ನ ಬಳಿಗೆ ಬಂದಿದೆ.





ನಿಮ್ಮ ಭಯವು ನಿವಾರಿಸಲ್ಪಡುತ್ತದೆ.

ನಿಮ್ಮ ಅವಮಾನವನ್ನು ಅಳಿಸಿಹಾಕಲ್ಪಡುತ್ತದೆ.

ನಿಮ್ಮ ಪಾಪಗಳು ಕ್ಷಮಿಸಲ್ಪಡುತ್ತವೆ.

ನಿಮ್ಮ ಹತಾಶೆ ನೀಗಿಹೋಗುತ್ತದೆ.

ನಿಮ್ಮ ಕಷ್ಟಗಳು, ಭೂಮ್ಯಾಕಾಶಗಳಿಗೆ ಒಡೆಯನೂ ರಕ್ಷಕನೂ, ಪರಿಪೂರ್ಣನೂ, ನಮ್ಮ ಪಾಪಗಳಿಗಾಗಿ ಯಜ್ಞವಾಗಿ ಮಾರ್ಪಟ್ಟವನೂ ಮರಣವನ್ನು ಜಯಿಸಿದಾತನು ಎಲ್ಲರ ಪ್ರಭುವೂ ನಜರೇತಿನವನಾದ ಯೇಸುವಿನ ಹೆಸರಿನಲ್ಲಿ ಪರಿಹರಿಸಲ್ಪಡುತ್ತದೆ.



ಇಂದು ಆತನನ್ನು ನಿನ್ನ ದೇವರಾಗಿ ಅಂಗೀಕರಿಸಿಕೋ! ಈಗ ಆತನಿಗೆ ಮೊರೆಯಿಡು, ಆತನು ನಿನ್ನ ದೇವರೆಂದು ಅರಿಕೆಮಾಡು, ಎಲ್ಲರಿಗೂ ಈ ಸಂತೋಷದ ಸುದ್ಧಿಯನ್ನು ತಿಳಿಸು.

# ಎಲ್ಲಾ ವಿಷಯಗಳ ನವೀಕರಣ – ಈ ಸಂತೋಷದ ಸುದ್ಧಿಯನ್ನು ನಿಮಗಾಗಿ ತಂದವರು:

**WGS Ministries**

**PO Box 90047**

**San Antonio, TX 78209**

**U.S.A.**

**1.800.248.4687**

**info@WGSministries.org**

**www.WGSministries.org**

**Watch The Renewal of All Things at**

**www.WGSministries.org/renewal-video/**